ಈ ಚಿತ್ರದ ಚಿತ್ರೀಕರಣ ಆರಂಭವಾಗುವುದಕ್ಕಿಂತ ಮೊದಲೇ 'ಮಹಿಷಾಸುರ' ಎಂಬ ಇನ್ನೊಂದು ಸಿನಿಮಾಗೂ ನಾಯಕಿಯಾಗಿ ನಟಿಸುವ ಅವಕಾಶ ಸಿಕ್ಕಿತು. ಕಾಕತಾಳಿಯವೆಂದರೆ ಇದರಲ್ಲಿಯೂ ಅವರಿಗೆ ಸಿಕ್ಕಿದ್ದು ಹಳ್ಳಿ ಹುಡುಗಿ ಪಾತ್ರವೇ! ಹಾಗಂತ ಎರಡೂ ಒಂದೇ ರೀತಿಯ ಪಾತ್ರಗಳಲ್ಲ.

"ಮಹಿಷಾಸುರ' ಚಿತ್ರದಲ್ಲಿ ನನ್ನ ಪಾತ್ರದ ಹೆಸರು ಕಾವೇರಿ. ಈಗ 25 ವರ್ಷಗಳ ಹಿಂದಿನ ಸಿನಿಮಾಗಳನ್ನು ನೋಡಿದರೆ ಎಂಥ ಖುಷಿ ಸಿಗುತ್ತಿತ್ತೋ ಅದೇ ಖುಷಿಯನ್ನು ಕೊಡುವಂಥ ಸಿನಿಮಾ ಇದು. ಆ ಕಾಲದಲ್ಲಿಯೇ ನಡೆಯುವ ಕಥೆ. ಹಾಗಾಗಿ ಪಾತ್ರ ಪರಿಸರ, ವೇಷಭೂಷಣ ಎಲ್ಲವೂ ಆ ರೀತಿಯಲ್ಲಿಯೇ ಇವೆ. ಇದರಲ್ಲಿ ಅತ್ಯಂತ ಮುಗ್ಧ ಹುಡುಗಿ. ಆದರೆ 'ಲಡ್ಡು' ಸಿನಿಮಾದಲ್ಲಿ ಹಾಗಲ್ಲ. ಇದಕ್ಕೆ ತದ್ವಿರುದ್ಧವಾದ ಬಜಾರಿ ಪಾತ್ರ" ಎಂದು ಹಳ್ಳಿ ಚೌಕಟ್ಟಿನಲ್ಲೇ ಭಿನ್ನ ಪಾತ್ರದಲ್ಲಿ ನಟಿಸುವ ಅವಕಾಶ ಸಿಕ್ಕಿದ್ದಕ್ಕೆ ಅವರು ಖುಷಿಪಡುತ್ತಾರೆ.

ಬಾಲನಟಿಯಾಗಿ ಕಲಿತಿದ್ದು ಅವರಿಗೆ ಈಗ ಸಾಕಷ್ಟು ಪ್ರಯೋಜನಕ್ಕೆ ಬರುತ್ತಿದೆಯಂತೆ. 'ನಾನು ಚಿಕ್ಕವಳಾಗಿದ್ದಾಗ ತುಂಬ ದೊಡ್ಡ ದೊಡ್ಡ ಸ್ಟಾರ್ ನಟರ ಜೊತೆಯಲ್ಲಿ ನಟಿಸಿದ್ದೇನೆ. ಪಾತ್ರ ಚಿಕ್ಕದೇ ಆಗಿರಬಹುದು. ಆದರೆ ಅವರು ಹೇಗೆ ನಟಿಸುತ್ತಾರೆ ಎಂದು ಆಗಲೇ ನೋಡುತ್ತಿದ್ದೆ. ಹಾಗಾಗಿ ನಟನೆ ಎಂಬುದು ಒಂದು ಪಾತ್ರದಲ್ಲಿ ಪರಕಾಯ ಪ್ರವೇಶ ಮಾಡುವ ಪ್ರಯತ್ನ ಎಂಬುದು ನನಗೆ ತಿಳಿದಿದೆ. ಹಾಗಾಗಿಯೇ ಈಗಲೂ ನನಗೆ ನಟನೆ ಕಷ್ಟ ಎನಿಸಲಿಲ್ಲ. ಕ್ಯಾಮೆರಾ ಎದುರಿಸುವುದು ಹೆದರಿಕೆ ಹುಟ್ಟಿಸಲಿಲ್ಲ' ಎನ್ನುತ್ತಾರೆ ಅವರು.

ನಟನೆಗೆ ಪೂರಕವಾಗುವ ಹಾಗೆ ಬಿಂದು ಅವರಿಗೆ ಭರತನಾಟ್ಯಂ ಕೂಡ ಗೊತ್ತಿದೆ. ಅಮ್ಮನಿಂದ ಸಂಗೀತದ ಜ್ಞಾನ ದೊರಕಿದೆ.

'ನಾನು ಸಿನಿಮಾ ಮಾಡುತ್ತಿರುವುದು ಅಮ್ಮನ ಕನಸು ಪೂರೈಸಲು. ಹಣ ಮಾಡಲು ಅಲ್ಲ' ಎಂದು ಖಚಿತವಾಗಿ ಹೇಳುವ ಅವರು, 'ಕೋಟಿ ಕೊಟ್ಟರೂ ಎಕ್ಸ್‌ಪೋಸ್ ಮಾಡುವ ದೃಶ್ಯಗಳಲ್ಲಿ ನಟಿಸಲಾರೆ' ಎಂದೂ ದೃಢವಾಗಿ ನುಡಿಯುತ್ತಾರೆ. 'ನನಗೆ ಇಂಥದ್ದೇ ಪಾತ್ರ ಬೇಕು ಎಂದೇನೂ ಇಲ್ಲ. ಹಳ್ಳಿ ಹುಡುಗಿಯ ಪಾತ್ರವೇ ಆಗಬೇಕು ಎಂದೂ ಹೇಳಲಾರೆ. ಆದರೆ ನನ್ನ ಮನೆಯವರೆಲ್ಲ ಒಟ್ಟಿಗೇ ಕೂತು ನನ್ನ ಸಿನಿಮಾ ನೋಡಬೇಕು. ಅವರಿಗೆ ಮುಜುಗರವಾಗುವಂಥ ಒಂದೇ ಒಂದು ದೃಶ್ಯ ಇದ್ದರೂ ನಾನು ನಟಿಸಲಾರೆ' ಎಂಬುದು ಅವರ ಸ್ಪಷ್ಟ ನಿಲುವು.

'ಮಾಡರ್ನ್ ಪಾತ್ರಗಳೆಲ್ಲವೂ ಅಶ್ಲೀಲವಾಗಿರಬೇಕು ಎಂದೇನಿಲ್ಲ. ಸಭ್ಯವಾಗಿರುವ ಯಾವುದೇ ಪಾತ್ರದಲ್ಲಿ ನಟಿಸುತ್ತೇನೆ. ಹಗ್ ಸೀನ್ ಇದೆ ಅಂದ್ರೂ ಯಾರಿಗೂ ಅಸಹ್ಯವಾಗಿ ಕಾಣಬಾರದು. ಬೇಜಾರಿಗೂ ಅಪ್ಪಿಕೊಳ್ತಾರೆ. ಇನ್ನೊಂದಕ್ಕೂ ಅಪ್ಪಿಕೊಳ್ತಾರೆ. ಲವ್‌ನಲ್ಲಿ ಅಪ್ಪಿಕೊಳ್ಳುವುದು ಓಕೆ. ಬೇರೆ ಥರ ಇದ್ದರೆ ಒಪ್ಪಿಕೊಳ್ಳಲ್ಲ' ಎನ್ನುವ ಬಿಂದುಶ್ರೀ ಅವರ ಕೈಯಲ್ಲಿ ಇನ್ನೂ ಎರಡು ಸಿನಿಮಾಗಳು ಈಗಾಗಲೇ ಇವೆ.

'ವಲ್ಗರ್ ಅನಿಸುವ ದೃಶ್ಯಗಳು ಇದ್ದರೆ ಎಂಥ ಅವಕಾಶವೇ ಆದರೂ ಒಲ್ಲೆ' ಎನ್ನುವ ಬಿಂದುಶ್ರೀ ನಟನೆಯ ಬಲದಿಂದಲೇ ಚಿತ್ರರಂಗದಲ್ಲಿ ಉಳಿದು ಬೆಳೆಯುವ ಸಂಕಲ್ಪ ತೊಟ್ಟು ಮುಂದಡಿಯಿಡುತ್ತಿದ್ದಾರೆ. ■



# ದೀಪಾ ಕಮ್‌ಬ್ಯಾಕ್!

ಈ ಹೆಸರು ಕೇಳಿದರೆ ಎದೆಯಲ್ಲಿ ನೂರು ವೋಲ್ಟೇಜ್ ಬಲ್ಬ್ ಹತ್ತಿದಂತಾಗುವ ಹುಡುಗರಿಗೇನೂ ಕಮ್ಮಿ ಇಲ್ಲ. ಬೇರೆ ಸಿನಿಮಾದ 'ದೀಪದ ಕಣ್ಣುಗಳಲ್ಲಿ ಹುಣ್ಣಿಮೆ ಪ್ರತಿದಿನವೂ' ಎಂಬ ಸಾಲುಗಳನ್ನು ದೀಪಾ ಸನ್ನಿಧಿಗೆ ಅನ್ವಯಿಸಿ ಖುಷಿಪಡುವವರು ಸಾಕಷ್ಟಿದ್ದಾರೆ. ಕೆನ್ನೆಯಾ ದಿಣ್ಣೆಗಳಲ್ಲಿ ಮುಗಿಯದ ಮುಂಜಾವನ್ನು ಹುದುಗಿಸಿಕೊಂಡಿರುವ ಈ ಬೆಡಗಿ ಕೆಲವೇ ಸಿನಿಮಾಗಳಲ್ಲಿ ಮಾಡಿರುವ ಮೋಡಿಯೇ ಅಂಥದ್ದು. 2011ರಲ್ಲಿ ದರ್ಶನ್ ಅವರ 'ಸಾರಥಿ' ಸಿನಿಮಾದಲ್ಲಿ ನಾಯಕನ ಸಂಗಾತಿಯಾಗಿ ರಥದಲ್ಲಿ ವಿರಾಜೆಯಾಗಿದ್ದ ದೀಪಾ, 'ಪರಮಾತ್ಮ'ದಲ್ಲಿ ಕೆಸರುಗದ್ದೆ ಓಟದಲ್ಲಿ ಪುನೀತ್ ಹೆಗಲು ಕಚ್ಚಿದ್ದನ್ನು ಅವರ ಅಭಿಮಾನಿಗಳಿನ್ನೂ ಮರೆತಿಲ್ಲ.

ಗೋಲ್ಡನ್ ಸ್ಟಾರ್ ಜೊತೆ 'ಸಕ್ಕರೆ'ಯಂಥ ನಗುವನ್ನು ಉಣಿಸಿದ, 'ಜಾನೂ' ಚಿತ್ರದಲ್ಲಿ ಯಶ್ ಅವರೊಂದಿಗೆ ಜಾಮೂನಿನಂತೆ ಕಾಣಿಸಿಕೊಂಡಿದ್ದ ಈ ಹುಡುಗಿ, ನಂತರ ತಮಿಳು ಚಿತ್ರರಂಗದಲ್ಲಿಯೂ ವಿಹಾರ ಮಾಡಿಬಂದರು. 2017ರಲ್ಲಿ ದರ್ಶನ್ ಅವರ 'ಚಕ್ರವರ್ತಿ'ಯಲ್ಲಿ ಮುಕುಟಮಣಿಯಾಗಿ ಮೆರೆದಿದ್ದೇ ಕೊನೆ. ದೀಪಾ ನಾಪತ್ತೆಯಾದರು. ವೃತ್ತಿಜೀವನದ ತುತ್ತತುದಿಗೇರುತ್ತಿರುವಾಗ ಇದ್ದಕ್ಕಿದ್ದಂತೆ ನಾಯಕ ನಟಿಯೊಬ್ಬಳು ಅಂತರ್ಧಾನಳಾದರೆ ಏನೇನು ಕತೆಗಳು ಹುಟ್ಟಿಕೊಳ್ಳುತ್ತವೆಯೋ ಅವೆಲ್ಲವೂ ದೀಪಾ ಸುತ್ತಲೂ ಹರಿದಾಡಿದವು.

ಈಗ ದೀಪಾ ಮತ್ತೆ ಪ್ರತ್ಯಕ್ಷವಾಗಿದ್ದಾರೆ! ಸಿನಿಮಾದಲ್ಲಲ್ಲ. ಸೋಷಿಯಲ್ ಮೀಡಿಯಾಗಳಲ್ಲಿ! ಟ್ವಿಟರ್‌ನಲ್ಲಿ ದೀಪಾ ಸನ್ನಿದಿ ಅಧಿಕೃತ ಪುಟ ಎಂದು ಹೇಳಿಕೊಂಡಿರುವ ಪುಟವೊಂದು ಆಗಸ್ಟ್‌ನಿಂದ ಕಾರ್ಯನಿರ್ವಹಿಸುತ್ತಿದೆ. ದೀಪಾ ಬಣ್ಣದ ಬದುಕಿಗೆ ಮರಳಿದ್ದಾರೆಯೇ? ಬೆಳ್ಳಿತೆರೆಯಲ್ಲಿ ಮತ್ತೆ ಮಿಂಚಲಿದ್ದಾರೆಯೇ? ಇಷ್ಟು ದಿನ ಎಲ್ಲಿದ್ದರು? ಏನು ಮಾಡುತ್ತಿದ್ದರು? ಎಂಬೆಲ್ಲ ಪ್ರಶ್ನೆಗಳು ಏಳುವುದು ಸಹಜ. ಆದರೆ ಅವುಗಳಿಗೆ ಖಚಿತ ಉತ್ತರ ಇರುವುದು ದೀಪಾ ಬಳಿಯಲ್ಲಿಯೇ. ಹಾಗಾಗಿ ಅವರ ಮಾತುಗಳಿಗೇ ಕಾಯಬೇಕು.

ದೀಪಾ ಹೆಸರಲ್ಲಿ ಇರುವ ಟ್ವಿಟರ್ ಖಾತೆ ಅಧಿಕೃತ (ಬ್ಲೂ ಟಿಕ್) ಚಿಹ್ನೆ ಹೊಂದಿಲ್ಲ. ಸ್ಟಾರ್‌ಗಳ ಹೆಸರಿನಲ್ಲಿ ಸೋಷಿಯಲ್ ಮಿಡಿಯಾದಲ್ಲಿ ದಿನಕ್ಕೊಂದು ಖಾತೆ ತೆರೆದುಕೊಳ್ಳುವುದೂ ಮುಚ್ಚುವುದೂ ಮಾಮೂಲಿ. ಇದೂ ಅಂಥದ್ದೇ ಇನ್ನೊಂದು ಫೇಕ್ ಖಾತೆ ಆಗಿರುವ ಸಾಧ್ಯತೆಯನ್ನೂ ತೆಗೆದುಹಾಕುವಂತಿಲ್ಲ. ಆದರೆ ಈ ದೀಪದ ಹುಡುಗಿಯನ್ನು ಎದುರು ನೋಡುತ್ತಿರುವ ಅಭಿಮಾನಿಗಳಿಗೆ ಮಾತ್ರ ಅದು ನಿಜದ ಬೆಳಕಾಗಿಯೇ ಕಾಣಿಸುತ್ತಿದೆ. ಹಾಗೊಮ್ಮೆ ಅದು ನಿಜವಾದರೆ ಕನ್ನಡ ಚಿತ್ರರಂಗ ಪ್ರತಿಭಾವಂತ ನಟಿಯೊಬ್ಬರನ್ನು ಮತ್ತೆ ಪಡೆದುಕೊಳ್ಳುತ್ತದೆ ■